# ನಾನು ಬೇರೆ ನೀನು ಬೇರೆ ಹೇಗಾದೇವು?

ನೀನೇ ದೊಡ್ಡವನೋ...
ನಿನ್ನ ಧರುಮ ದೊಡ್ಡದೋ?
ನಿನ್ನ ಕರುಮ ದೊಡ್ಡದೋ?
ನಿನ್ನ ಚರುಮ ದೊಡ್ಡದೋ?

ನಿನ್ನ ಜಾತಿ ನಿನ್ನ ನೀತಿ...
ನಿನ್ನ ಮತಿ ನಿನ್ನ ಭಾತಿ
ದೊಡ್ಡದೋ?

ದೊಡ್ಡವನೇ...
ಭಿನ್ನಭೇದವ ಮರೆತು
ಮೆರೆಯಬಾರದೆ ದೊಡ್ಡತನವನು?

ಒಂದೇ ದೇಶ
ವಿವಿಧ ವೇಷ...
ವಿವಿಧ ಭಾಷೆ
ವಿವಿಧ ಆಶೆ...
ಒಂದೇ ಸೂರ್ಯನಡಿ
ಒಂದೇ ಚಂದ್ರನಡಿ
ಆನು ನೀನು ತಾನು
ಹೇಗೆ ಬೇರಾದೇವು?

ನಾ... ಸಣ್ಣವನು... ಈ
ಮಣ್ಣವನು...
ಒಂದೇ ತಾವು ಒಂದೇ ರೇವು
ನಾನು ನೀನು ಹೇಗೆ ಬೇರಾದೇವು?

● ಸವಿತಾ ನಾಗಭೂಷಣ

